# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಗುರುಪಾದಯ್ಯ, ಅಂದಿನ ಲೆಕ್ಕಾಧೀಕ್ಷಕರು, ಗ್ರಾ.ಕು.ನೀ.& ನೈ.ವಿಭಾಗ, ಕಲಬುರಗಿ ಇವರ ಮಾನ್ಯ ಕೆ.ಎ.ಟಿ.ಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ:20296/2021 ರಲ್ಲಿನ ಆದೇಶದ ಅನುಸಾರ ಪ್ರಕರಣವನ್ನು ಸಾಕ್ಷಿಗಳ ಹೇಳಿಕೆಯನ್ನು ಪಡೆಯುವ ಹಂತದಿಂದ ಪರಿಶೀಲಿಸುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಪತ್ರ ಸಂಖ್ಯೆ: ಜಿ.ಪಂ.ಕ/ ಆಡಳಿತ/ ವಿಚಾರಣೆ/5/2015-16 ದಿನಾಂಕ: 28.09.2016 ಮತ್ತು 23.12.2016. ರಿಂದ 4/2017-18/ನಂ.78, ದಿನಾಂಕ: 15.04.2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 27 ಇಎನ್ ಕ್ಯೂ 2016, ದಿನಾಂಕ:04.01.2018.
3. ವಿಚಾರಣಾ ವರದಿ ದಿನಾಂಕ: 21.05.2019
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 27 ಇಎನ್ ಕ್ಯೂ 2016, ದಿನಾಂಕ:07.12.2020.
5. ಮಾನ್ಯ ಕೆ.ಎ.ಟಿ. ಆದೇಶದ ದಿನಾಂಕ:16.11.2021

**ಪ್ರಸ್ತಾವನೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರು ಮೇಲೆ ಕ್ರಮಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 28.09.2016 ಮತ್ತು 23.12.2016ರ ಪತ್ರದ ಜೊತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ ವ್ಯಾಪ್ತಿಯಲ್ಲಿ ಕೈಗೊಂಡ 59 ನೀರು ಸರಬರಾಜು ಕಾಮಗಾರಿಗಳಿಗೆ ಒಂದು ಬಾರಿ ಪಾವತಿಯಾದ ಕಾಮಗಾರಿಯ ಬಿಲ್ಲುಗಳನ್ನು ಸುಳ್ಳು ದಾಖಲೆಗಳನ್ನು ಸೃಷ್ಟಿಸುವ ಮೂಲಕ 2ನೇ ಬಾರಿಗೆ ರೂ.63,44,939/-ಗಳನ್ನು ಪಾವತಿಸಿ ನಂತರ ವಾಪಸ್ ಪಡೆದು ಗಂಭೀರ ಸ್ವರೂಪದ ದುರ್ನಡತೆ ಎಸಗಿರುತ್ತಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ಮೇಲೆ ಓದಲಾದ ಕ್ರಮಸಂಖ್ಯೆ (2) ರಲ್ಲಿ ಈ ಕೆಳಕಂಡ ಇಬ್ಬರು ಆಪಾದಿತರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957ರ ನಿಯಮ 11 ರನ್ವಯ ವಿವರವಾದ ಜಂಟಿ ಇಲಾಖಾ ವಿಚಾರಣೆ ನಡೆಸಲು ಶ್ರೀ ಎಸ್.ಎನ್.ಗದ್ದಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

1. ಶ್ರೀ ಬಿ.ಮಂಜುನಾಥ್, ಅಂದಿನ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ.& ನೈ.ವಿಭಾಗ, ಕಲಬುರಗಿ ಮತ್ತು
2. ಶ್ರೀ ಗುರುಪಾದಯ್ಯ, ಅಂದಿನ ಲೆಕ್ಕಾಧೀಕ್ಷಕರು, ಗ್ರಾ.ಕು.ನೀ.& ನೈ.ವಿಭಾಗ, ಕಲಬುರಗಿ

ವಿಚಾರಣಾಧಿಕಾರಿಯವರು ವಿವರವಾದ ವಿಚಾರಣೆಯನ್ನು ನಡೆಸಿ ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ: 21.05.2019 ರಂದು ನೀಡಿದ ವಿಚಾರಣಾ ವರದಿಯಲ್ಲಿ ಸದರಿಯವರುಗಳ ವಿರುದ್ಧದ ಆರೋಪವು ಸಾಬೀತಾಗಿರುವುದಿಲ್ಲವೆಂದು ಅಭಿಪ್ರಾಯ ಪಟ್ಟಿರುವರು. ಆದರೆ ಸರ್ಕಾರವು ವಿಚಾರಣಾ ವರದಿಯನ್ನು ಒಪ್ಪದೇ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳ ನಿಯಮ 11 ಎ ರ ಅನುಸಾರ ಪ್ರಕರಣವನ್ನು ಪುನರ್ ಪರಿಶೀಲಿಸಿ ಆಪಾದಿತರ ವಿರುದ್ಧದ ಆರೋಪಗಳು ಸಾಬೀತಾಗಿವೆಯೆಂದು ನಿರ್ಣಯಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಸರ್ಕಾರವು ದಿನಾಂಕ:07.12.2020 ರ ಆದೇಶದಲ್ಲಿ ಈ ಕೆಳಕಂಡ ದಂಡನೆಯನ್ನು ವಿಧಿಸಲಾಗಿದೆ.

| ಕ್ರ.ಸಂ | ಆಪಾದಿತರ ಹೆಸರು ಮತ್ತು ಪದನಾಮ | ವಿಧಿಸಲಾದ ದಂಡನೆ |
|---|---|---|
| 1 | ಶ್ರೀ ಬಿ.ಮಂಜುನಾಥ, ಅಂದಿನ ಕಾರ್ಯಪಾಲಕ ಇಂಜಿನಿಯರ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ **(ಹಾಲಿ ನಿವೃತ್ತ)** | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(1)(ಎ)ರ ಅನುಸಾರ ಸದರಿಯವರ ನಿವೃತ್ತಿ ವೇತನದಲ್ಲಿ ಪ್ರತಿ ಮಾಹೆ ರೂ.2000/- ಗಳಂತೆ 2 ವರ್ಷಗಳ ಅವಧಿಗೆ ಕಡಿತಗೊಳಿಸುವುದು. |
| 2 | ಶ್ರೀ ಗುರುಪಾದಯ್ಯ, ಅಂದಿನ ಲೆಕ್ಕಾಧೀಕ್ಷಕರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ ಪ್ರಸ್ತುತ ಲೆಕ್ಕಾಧೀಕ್ಷಕರು, ಮುಖ್ಯ ಇಂಜಿನಿಯರ್ ರವರ ಕಛೇರಿ, ಈಶಾನ್ಯ ವಲಯ, ಕಲಬುರಗಿ. | ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳು, 1957ರ ನಿಯಮ 8(iii)ರ ಅನುಸಾರ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಹೊಂದುವಂತೆ ತಡೆಹಿಡಿಯುವುದು. |

ಸದರಿ ದಂಡನಾದೇಶದ ವಿರುದ್ಧ ಶ್ರೀ ಗುರುಪಾದಯ್ಯ, ಇವರು ಕಲಬುರಗಿ ವಿಭಾಗದ ಕೆ.ಎ.ಟಿ.ಯಲ್ಲಿ ಅರ್ಜಿ ಸಂಖ್ಯೆ: 20296/2021 ದಾಖಲಿಸಿರುತ್ತಾರೆ. ಸದರಿ ಅರ್ಜಿಗೆ ಸಂಬಂಧಿಸಿದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ(5) ರಲ್ಲಿ ಕೆ.ಎ.ಟಿ.ಯು ದಿನಾಂಕ:16.11.2021 ರಂದು ಈ ಕೆಳಕಂಡಂತೆ ಆದೇಶಿಸಿದೆ:-

(i) Application is allowed in part and the impugned order bearing No. Dated 07.12.2020 at Annexure-A8 passed by the 1st Respondent is set-aside in so far as it pertains to the applicant herein.

(ii) The matter is remitted back to the 1st Respondent to entrust the matter to the enquiry officer, who has conducted enquiry against Executive Engineer. If the said enquiry officer is not available then to entrust the matter to a fresh enquiry officer who has to record evidence afresh and proceed in accordance with law including providing opportunity to the applicant to cross examine the prosecution witness and to conclude the enquiry tithing six months from the date of receipt of copy of this order.

(iii) Thereafter, the 1st Respondent is required to take a decision within two months. The entire process are required to be completed within eight months from the date of receipt of certified copy of this order.

(iv) In the event if the enquiry is not concluded by the enquiry officer within six months, it is deemed that the proceedings against the applicant is abandoned and the applicant will be entitled to all consequential benefits.

ಮೇಲ್ಕಂಡ ಆದೇಶದಂತೆ ಮಾನ್ಯ ಆಡಳಿತ ನ್ಯಾಯ ಮಂಡಳಿಯು ನೀಡಿರುವ ಆದೇಶದಲ್ಲಿ ಸರ್ಕಾರದ ದಂಡನಾದೇಶವನ್ನು ರದ್ದುಪಡಿಸಿ ಈ ಪ್ರಕರಣದಲ್ಲಿ ಹೊಸದಾಗಿ ಇಲಾಖಾ ವಿಚಾರಣೆಯನ್ನು ಈ ಹಿಂದೆ ಇಲಾಖಾ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಯವರಿಗೆ ಪುನರ್ ಒಪ್ಪಿಸಿ ಹೊಸದಾಗಿ ಸಾಕ್ಷಿಗಳ ಹೇಳಿಕೆ ಪಡೆಯುವ ಹಂತದಿಂದ ಇಲಾಖಾ ವಿಚಾರಣೆಯನ್ನು ಮುಂದುವರೆಸಲು ಹಾಗೂ ಆಪಾದಿತರಿಗೆ ಸಾಕ್ಷಿಗಳಿಗೆ ಪಾಟಿ ಸವಾಲು ಮಾಡಲು ಅವಕಾಶ ನೀಡಬೇಕೆಂದು ಸ್ಪಷ್ಟಪಡಿಸಿ ಇಲಾಖಾ ವಿಚಾರಣೆಯನ್ನು ಆರು ತಿಂಗಳೊಳಗಾಗಿ

ಪೂರ್ಣಗೊಳಿಸಬೇಕೆಂದು ಸೂಚಿಸಿರುತ್ತದೆ. ಈ ಕುರಿತಂತೆ ಶಿಸ್ತು ಪ್ರಾಧಿಕಾರವು ಎರಡು ತಿಂಗಳೊಳಗಾಗಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸ್ಪಷ್ಟಪಡಿಸಿರುತ್ತದೆ. ಒಟ್ಟಾರೆಯಾಗಿ ಎಂಟು ತಿಂಗಳೊಳಗಾಗಿ ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಲು ನಿರ್ದೇಶನ ನೀಡಿರುತ್ತದೆ. ಒಂದು ವೇಳೆ ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದೇ ಇದ್ದಲ್ಲಿ ವಿಚಾರಣಾ ನಡವಳಿಗಳು ರದ್ದಾಗುತ್ತವೆಯೆಂದು ಸಹ ಸ್ಪಷ್ಟಪಡಿಸಿರುತ್ತದೆ.

ಆದುದರಿಂದ ಮಾನ್ಯ ಕೆ.ಎ.ಟಿ.ಯ ಅರ್ಜಿ ಸಂಖ್ಯೆ: 20296/2021 ರ ದಿನಾಂಕ:16.11.2021 ರಂದು ನೀಡಿರುವ ಆದೇಶದಂತೆ ಸಾಕ್ಷಿಗಳ ಹೇಳಿಕೆ ಪಡೆಯುವ ಹಂತದಿಂದ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಪ್ರಕರಣವನ್ನು ವಿಚಾರಣಾಧಿಕಾರಿಯವರಿಗೆ ವಹಿಸುವುದು ಸೂಕ್ತವೆಂದು ಸರ್ಕಾರವು ನಿರ್ದರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 108 ಜಿಪಅ 2021</u>**
**<u>ಬೆಂಗಳೂರು, ದಿನಾಂಕ:21.02.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಸರ್ಕಾರವು ಶ್ರೀ ಗುರುಪಾದಯ್ಯ, ಅಂದಿನ ಲೆಕ್ಕಾಧೀಕ್ಷಕರು ಇವರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ ಇವರು ಕಲಬುರಗಿ ವಿಭಾಗದ ಕೆ.ಎ.ಟಿ.ಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ:20296/2021 ರಲ್ಲಿ ಮಾನ್ಯ ನ್ಯಾಯ ಮಂಡಳಿಯು ದಿನಾಂಕ:16.11.2021 ರಂದು ನೀಡಿದ ಆದೇಶದ ಅನುಸಾರ ಪ್ರಕರಣವನ್ನು ಸಾಕ್ಷಿಗಳ ಹೇಳಿಕೆಯನ್ನು ಪಡೆಯುವ ಹಂತದಿಂದ ಪರಿಶೀಲಿಸಿ ವರದಿಯನ್ನು ಒಂದು ತಿಂಗಳ ಒಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಶ್ರೀ ಎಸ್.ಎನ್.ಗದ್ದಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಇವರಿಗೆ ಮತ್ತೊಮ್ಮೆ ಪ್ರಕರಣವನ್ನು ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ. ನದೀಮ್ 21/2

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
3. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ
5. ಶ್ರೀ ಸಂಗಪ್ಪ ಎನ್. ಗದ್ದಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಎಲ್.ಐ.ಸಿ. ಆಫೀಸ್ ಮತ್ತು ಅಂಬಾಭವಾನಿ ದೇವಸ್ಥಾನದ ಹತ್ತಿರ, ಯಲಬುರ್ಗಾ ಅಂಚೆ, ಯಲಬುರ್ಗಾ ತಾಲ್ಲೂಕು ಕೊಪ್ಪಳ ಜಿಲ್ಲೆ.
6. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
7. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ (ಆಡಳಿತ-1) ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು-ಎ ಮತ್ತು ಸಿ)
9. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್ ಸೈಟ್ ನಲ್ಲಿ ಪ್ರಕಟಿಸುವ ಸಲುವಾಗಿ.
10. ಶಾಖಾ ರಕ್ಷಾ ಕಡತ / ಹೆಚ್ಚುವರು ಪ್ರತಿಗಳು.